ಲೇಖನ 03

# ಮಲ್ಲಿಕಾಕ್ಷ ಹಕ್ಕಿಗಳ ಕುತೂಹಲದ ಕೂಗು ಕದನ

ಬೇಸಿಗೆಯ ಸೂರ್ಯ ಪಶ್ಚಿಮಕ್ಕೆ ವಾಲುತ್ತಿದ್ದರೂ ಭೂಮಿಯ ಕಾವು ಮಾತ್ರ ಕಡಿಮೆಯಾಗಿರಲಿಲ್ಲ. ಸುತ್ತಲಿನ ಕುರುಚಲು ಕಾಡು ತನ್ನ ಹಸಿರನ್ನೆಲ್ಲ ಕಳೆದುಕೊಂಡು ಬೂದು ಬಣ್ಣಕ್ಕೆ ತಿರುಗಿದಂತೆ ಕಾಣುತ್ತಿತ್ತು. ಕಾಲ ಕೆಳಗೆ ಒಣಗಿದ ಎಲೆಗಳು ಚರಕ್ ಚರಕ್ ಸದ್ದು ಮಾಡುತ್ತಿದ್ದರೆ, ಕೈಯಲ್ಲಿನ ಭಾರವಾದ ಮಾರುದ್ದ ಲೆನ್ಸ್ ಹಾಕಿದ ಕ್ಯಾಮೆರಾ ಹಿಡಿದು ಯಾವದಾರೂ ಒಂದು ವಿಶೇಷ ಕ್ಷಣಕ್ಕಾಗಿ ನನ್ನ ಕಣ್ಣುಗಳು ಹಂಬಲಿಸುತ್ತಿದ್ದವು. ಕುರುಚಲು ಕಾಡಿನ ಸಂಜೆ ಅಷ್ಟು ಸುಲಭದ್ದಲ್ಲ. ಒಣಗಿದ ಮುಳ್ಳಿನ ಪೊದೆಗಳು, ಧೂಳಿನ ವಾಸನೆ ಮತ್ತು ನೀರಿಗಾಗಿ ಹಾತೊರೆಯುವ ಜೀವಸಂಕುಲ ಇವುಗಳ ನಡುವೆ ನಡೆಯುವುದೇ ಒಂದು ಸವಾಲು. ಆದರೆ, ಅಲ್ಲಿನ ನಿಶ್ಯಬ್ದತೆಯಲ್ಲಿ ಒಂದು ವಿಶಿಷ್ಟವಾದ ಲಯವಿರುತ್ತದೆ. ದೂರದಲ್ಲಿ ಸಣ್ಣದೊಂದು ನೀರಿನ ಹಳ್ಳವಿತ್ತು, ಹಕ್ಕಿಗಳು ಅಲ್ಲಿಗೆ ಬರುವ ನಿರೀಕ್ಷೆ ನನ್ನದಾಗಿತ್ತು. ನಾನು ಒಂದು ಒಣಗಿದ ರೆಂಬೆಯ ಹತ್ತಿರ ಸುಮ್ಮನೆ ಕುಳಿತುಕೊಂಡೆ.

ಹಾಗೆ ಕಾಯುತ್ತಿರುವಾಗ ಇದ್ದಕ್ಕಿದ್ದಂತೆ ಹಳದಿ ಬಣ್ಣದ ಮಿಂಚಿನಂತೆ ಎರಡು ಪುಟ್ಟ ಹಕ್ಕಿಗಳು ಬಂದು ಎದುರಿನ ರೆಂಬೆಯ ಮೇಲೆ ಕುಳಿತವು. ಅವು ಮತ್ಯಾರೂ ಅಲ್ಲ, ಅಪ್ಪಟ ಹಳದಿ ಪೋಷಾಕಿನ 'ಇಂಡಿಯನ್ ವೈಟ್-ಐ' (ಮಲ್ಲಿಕಾಕ್ಷ) ಹಕ್ಕಿಗಳು. ಕಣ್ಣಿನ ಸುತ್ತ ಬಿಳಿಯ ಬಣ್ಣದ ವೃತ್ತವಿರುವ ಈ ಹಕ್ಕಿಗಳು ನೋಡಲು ಎಷ್ಟು ಮುಗ್ಧವೋ, ಅಷ್ಟೇ ಚಟುವಟಿಕೆಯಿಂದ ಕೂಡಿದವು. ನನ್ನ ಮಸೂರದ (ಲೆನ್ಸ್) ಮೂಲಕ ನೋಡುತ್ತಿದ್ದಾಗ ನನಗೆ ಆಶ್ಚರ್ಯವಾಯಿತು!



ಚಿತ್ರ ಕೃಪೆ: :- ಶಶಿಧರಸ್ವಾಮಿ ಆರ್. ಹಿರೇಮಠ

ಆ ಎರಡು ಹಕ್ಕಿಗಳು ಅಕ್ಕಪಕ್ಕ ಕುಳಿತು ಕೇವಲ ಚಿಲಿಪಿಲಿ ಎನ್ನುತ್ತಿರಲಿಲ್ಲ, ಬದಲಿಗೆ ಆ ಹಕ್ಕಿಗಳೆರಡು ಚೂವ್ವಿಚ್ಚಚೂ... ಚೂವ್ವಿಚ್ಚಚೂ... ಎಂಬ ಗಲಾಟೆ ಕೂಗಿನೊಂದಿಗೆ ಒಂದನೊAದು ಮಾತಿನ ಕದನ ಪ್ರಾರಂಭಿಸಿಯೆ ಬಿಟ್ಟವು. ಹಳ್ಳಿ ಕಡೇ ರೈತಾಪಿ ಜನ ಜಗಲಿ ಕಟ್ಟೆಯ ಮೇಲೆ ಕುಳಿತು ಹರಟೆಹೊಡೆಯುತ್ತಿರುವಾಗ ಯಾವುದೊ ವಿಚಾರಕ್ಕೆ ಒಬ್ಬರಿಗೊಬ್ಬರ ಮಾತಿನ ಭರಾಟೆ ವಿಕೋಪಕ್ಕೆ ತಿರುಗಿ ಏರು ಧ್ವನಿಯಲ್ಲಿ ಮಾತನಾಡುವುದಿಲ್ಲವೇ ಅದೇ ರೀತಿ ಇದು ನಡೆಯ ತೊಡಗಿತು.

ಒಂದು ಹಕ್ಕಿ ತನ್ನ ಚುಂಚನ್ನು ತೆರದು ಇನ್ನೊಂದು ಹಕ್ಕಿಯತ್ತ ಜೋರಾಗಿ ಕೂಗಿದಾಗ ಇನ್ನೊಂದು ಹಕ್ಕಿ ನಾನೆನು ಕಮ್ಮಿ ಎಂದು ತಾನು ಬಾಯ್ತೆರೆದು ಎದೆ ಉಬ್ಬಿಸಿ ಸಿಟ್ಟಿನಿಂದ ಅದನ್ನು ಬೈದಾಗ ಅದು ಮರು ಉತ್ತರ ನೀಡಿ ಎದೆ ಉಬ್ಬಿಸಿದಾಗ ಇನ್ನೊಂದು ಶಾಂತವಾಗಿತು.

ಹೀಗೆ ಸುಮಾರು ನಿಮಿಷಗಳ ಕಾಲ ನಡೆದ ಅವುಗಳ ಕೂಗುಕದನವನ್ನು ನಾನು ಉಸಿರು ಬಿಗಿಹಿಡಿದು ಪೊಟೋಗ್ರಫಿ ಮಾಡಿಕೊಂಡೆ. ದೇಹವನ್ನು ಕೆಳಗಿಸಿ ಟೊಂಗೆಯ ಮೇಲೆ ಕುಳಿತು ಅವುಗಳು ಅಂತು ಇಂತು ಒಂದು ಇತ್ಯರ್ಥಕ್ಕೆ ಬಂದತೆ ಕಂಡವು. ಈ ಪ್ರಕೃತಿ ಮುಂದೆ ನಾವ್ಯಾರು ದೊಡ್ಡವರಲ್ಲ ನಮ್ಮನಮ್ಮಲಿ ಜಗಳವೇಕೆ ಎಂದು ಅವು ಒಟ್ಟಾಗಿ ಹಾರಿ ಹೋಗವು. ಹೌದು ಇವ್ಯಾಕೆ ಒಂದಕ್ಕೊಂದು ಈ ರೀತಿ ಕೂಗಿನ ಕದನ ಮಾಡಿದವೆಂದು ತಲೆಯಲ್ಲಿ ಪ್ರಶ್ನೆ ಉದ್ಭವಿಸಿ ಯೋಚಿಸಿದಾಗ ಅವು ತಮ್ಮ ಆವಾಸಕ್ಕಾಗಿ ಇಲ್ಲವೇ ಆಹಾರಕ್ಕಾಗಿ ತಮ್ಮತಮ್ಮಲ್ಲಿ ಕೂಗಾಡಿಕೊಂಡು ಕದನ ಮಾಡಿರಬೇಕೆಂದುಕೊಡೆ.



ಚಿತ್ರ ಕೃಪೆ: :- ಶಶಿಧರಸ್ವಾಮಿ ಆರ್. ಹಿರೇಮಠ

ಮಲ್ಲಿಕಾಕ್ಷ ಹಕ್ಕಿಗಳನ್ನು, ಬೆಳ್ಗಣ್ಣ, ಬೆಳ್ಗಣ್ಣು ಅಥವಾ ಶ್ವೇತನೇತ್ರಿ ಎಂದು ಕರೆಯುತ್ತಾರೆ. ಸಂಸ್ಕೃತದಲ್ಲಿ ಚಟಕಿಕಾ ಎಂದು ಹೆಸರಿಸಲಾಗಿದೆ. ಕೊಡವ ಭಾಷೆಯಲ್ಲಿ ಬೊಳ್ತಕಣ್ಣ್ ಎಂದು ಕರೆದರೆ, ಈ ಹಕ್ಕಿಯನ್ನು ಇಂಗ್ಲೀಷಿನಲ್ಲಿ ಓರಿಯಂಟಲ್ ವೈಟ್-ಐ (Oriental White-eye) ಅಥವಾ ಇಂಡಿಯನ್ ವೈಟ್-ಐ (Indian White-eye) ಎಂದು ಕರೆದು, ವೈಜ್ಞಾನಿಕವಾಗಿ ಝೂಸ್ಟೆರಾಪ್ಸ್ ಪಾಲ್ಪೆಬ್ರೋಸಸ್(Zosterops palpebrosus) ಎಂದು ಹೆಸರಿಸಿ ಪಾಸ್ಸರಿಫಾರ್ಮಿಸ್ (Passeriformes) ಗಣದ ಝೂಸ್ಟೆರೋಪಿಡೆ (Zosteropidae) ಕುಟುಂಭಕ್ಕೆ ಸೇರಿಸಲಾಗಿದೆ.

10 ಸೆಂ.ಮಿ.ನಷ್ಟು ಸಣ್ಣ ಗಾತ್ರದ ಹಸಿರು-ಹಳದಿ ವರ್ಣದ ಹಕ್ಕಿ. ಮೈ ಹಸಿರು ಮಿಶ್ರಿತ ಗಾಡ ಹಳದಿ, ಹಳದಿ ಕಂಠ, ಹೊಟ್ಟೆಯ ಭಾಗವು ಮಾಸಲು ಬಿಳಿ. ಕಣ್ಣಿನ ಸುತ್ತ ಎದ್ದು ಕಾಣುವ ಬಿಳಿಯ ಉಂಗುರದತಹ ಗುರುತು, ಇದಕ್ಕಾಗಿಯೇ ಈ ಹಕ್ಕಿಗಳಿಗೆ ಬೆಳ್ಗಣ್ಣು ಅಥವಾ ಶ್ವೇತನೇತ್ರಿ ಎಂಬ ಹೆಸರು ಬಂದಿದೆ. ನೀಳವಾದ ಚೂಪನೆಯ ಕಪ್ಪಾದ ಕೊಕ್ಕು ಹಾಗೂ ಕಾಲುಗಳು ಸಹ ಕಪ್ಪಾಗಿವೆ. ಚೂಪಲ್ಲದ ಚಪ್ಪಟೆಯ ಬಾಲ. ಗುಂಪಾಗಿ ಪರ್ಣಪಾತಿ ಕಾಡುಗಳಲ್ಲಿ, ಕುರುಚಲು ಕಾಡುಗಳಲ್ಲಿ, ತೋಟಗಳಲ್ಲಿ ಪೊದೆಗಳಲ್ಲಿ ಕಂಡುಬರುತ್ತವೆ. ಹೂವಿನ ಮಕರಂದ, ಹಣ್ಣಿನ ತಿರುಳು, ಕಾಯಿಗಳು ಇದರ ಆಹಾರ, ಅನೇಕ ವೇಳೆ ತಲೆಕೆಳಗಾಗಿ ಗಿಡದ ಟೊಂಗೆಯನ್ನು ಕಾಲಿನ ಬೆರಳಿನಿಂದ ಗಟ್ಟಿಯಾಗಿ ಹಿಡಿದುಕೊಂಡು ಜೊತು ಬಿದ್ದು ಅಲ್ಲಿರುವ ಆಹಾರವನ್ನು ತಿನ್ನುತ್ತವೆ. ಪೊದೆಗಳಲ್ಲಿ ಕೀಟಗಳನ್ನು ಹಿಡಿಯಲು ಹವಣಿಸುವುದು, ಇಂಪಾಗಿ ಕೂಗನ್ನು ಹೊಂದಿವೆ. ಇವು ಸ್ಥಳೀಯ ಹಕ್ಕಿಗಳಾಗಿವೆ.

ಗಂಡು-ಹೆಣ್ಣು ಪಕ್ಷಿಗಳೆರಡು ಸೇರಿಯೆ ಸಾಂಸಾರೀಕ ಹೊಣೆಯನ್ನು ನಿರ್ವಹಿಸುತ್ತವೆ. ಸಂತಾನೋತ್ಪತ್ತಿ ಸಮಯವು ಕಾಲ ಬಹುತೇಕ ಏಪ್ರೀಲ್ ನಿಂದ ಜುಲೈವರೆಗೆ. ಗಿಡದಲ್ಲಿ 2-3 ಮೀಟರ್ ಎತ್ತರದಲ್ಲಿ ರೆಂಬೆಗಳ ಕವಲಿಗೆ ತಾಗಿಕೊಂಡಿರುವAತೆ ನಾರಿನಿಂದ ಹೆಣೆಯಲ್ಪಟ್ಟ ಹೊರಗೆ ಜೇಡರಬಲೆ ಮೆತ್ತಿದ ಹೂದಿಕೆಯ ಪುಟ್ಟ ಬಟ್ಟಲಿನಾಕಾರದ ಗೂಡನ್ನು ಕಟ್ಟಿ ಅಚ್ಚ ನೀಲಿ ಬಣ್ಣದ 2 ರಿಂದ 3 ಮೊಟ್ಟೆಗಳನ್ನಿಟ್ಟು ಸುಮಾರು 12 ರಿಂದ 14 ದಿನಗಳ ಕಾಲ ಮೊಟ್ಟೆಗಳಿಗೆ ಕಾವು ನೀಡಿ ಮರಿಮಾಡಿಸುತ್ತವೆ.

**ಶಶಿಧರಸ್ವಾಮಿ ಆರ್. ಹಿರೇಮಠ**
**ಕದರಮಂಡಲಗಿ, ಹಾವೇರಿ, ಜಿಲ್ಲೆ**
**ಇಮೇಲ್: shashidhharswamyhiremath@gmail.com**